ದಿ: 09.02.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

-:ಪಾಟೀ ಸವಾಲು: : ಶ್ರೀ ಎಸ್.ಜಿ.,ವಕೀಲರಿಂದ :-

1. ನಿವೇಶನದಲ್ಲಿ ಭಾಗ ಕೋರಿ ಈ ದಾವೆಯನ್ನು ನಾನು ಹಾಗೂ ನನ್ನ ತಂದೆ ಸಲ್ಲಿಸಿರುತ್ತೇವೆ. ಮತ್ತು ಜಮೀನಿನ ಮೇಲೆ ಭಾಗ ಕೋರಿ ಈ ದಾವೆ ಸಲ್ಲಿಸಿರುತ್ತೇವೆ. ನಮ್ಮ ತಂದೆಗೆ ಭಾಗ ಬರಬೇಕೆಂದು ದಾವೆಯಲ್ಲಿ ಕೇಳಿರುತ್ತೇವೆ. ರುದ್ರಪ್ಪ ಎನ್ನುವವರ ಮೇಲೆ ಮಾತ್ರ ಈ ದಾವೆಯನ್ನು ಹೂಡಿರುತ್ತೇವೆ. ಐಟಮ್ ನಂ. 1 ರಲ್ಲಿ ನಮಗೆ 02 ಗುಂಟೆ ಭಾಗಬರಬೇಕಾಗಿರುತ್ತದೆ. 02 ನೇ ಐಟಮ್ ಸ್ವತ್ತಿನಲ್ಲಿ ನಮ್ಮ ತಾತನಿಗೆ ಅರ್ಧ ಭಾಗದ ಹಕ್ಕು ಇರುತ್ತದೆ ಅದರಲ್ಲಿ ನಮ್ಮ ತಂದೆಗೆ ಐದನೇ ಒಂದು ಭಾಗ ಇರುತ್ತದೆ. ಸದರಿ ವಿಚಾರವನ್ನು ದಾವೆಯಲ್ಲಿ ಹೇಳಿರುವುದಿಲ್ಲ.

2. ಪ್ರಮಾಣ ಪತ್ರದಲ್ಲಿ ಸದರಿ ವಿಚಾರವನ್ನು ಹೇಳಿರುವುದಿಲ್ಲ . ನನ್ನ ಅಜ್ಜನ ತಂದೆಯ ಹೆಸರು ರುದ್ರಪ್ಪ. ರುದ್ರಪ್ಪನಿಗೆ ಮೂರು ಜನ ಮಕ್ಕಳು ಅವರೆಂದರೆ ಸಿದ್ದಪ್ಪ, ಪರಣ್ಣ ಮತ್ತು ಮಲ್ಲಪ್ಪ. ಮೊದಲನೇ ಸಿದ್ದಪ್ಪನಿಗೆ ಪರಣ್ಣ , ಶಿವಣ್ಣ, ಮರುಳಸಿದ್ದಪ್ಪ, ಚಂದ್ರಣ್ಣ ಎಂಬ 4 ಜನ ಮಕ್ಕಳು ಇರುತ್ತಾರೆ. ನಮ್ಮ ತಾತನಿಗೆ ಗಂಗಾಧರಪ್ಪ ,ಶಿವರುದ್ರಪ್ಪ, ಶೇಖರಪ್ಪ , ಮಹೇಶ್ವರಪ್ಪ ಮತ್ತು ಪ್ರಕಾಶ್ ಎನ್ನುವ ಮಕ್ಕಳಿರುತ್ತಾರೆ. ಮೂರನೇ ಮಗ ಮಲ್ಲಪನಿಗೆ ರುದ್ರಪ್ಪ ಎನ್ನುವ ಮಗನಿರುತ್ತಾನೆ. ನಮ್ಮ ವಂಶದ ಮೂತ್ತಜ್ಜ ರುದ್ರಪ್ಪನವರು ಮೂಲತಃ ಮಾಡದಕೆರೆಯವರು. ಸದರಿ ರುದ್ರಜ್ಜನಿಗೆ ಮೂಲತಃ 14 ಎಕರೆ 20 ಗುಂಟೆ ಜಮೀನು ಇತ್ತು. ರುದ್ರಜ್ಜ ಮರಣ ಹೊಂದಿದ ನಂತರ ಅದು ಸಿದ್ದಪ್ಪನ ಹೆಸರಿಗೆ ಬಂದಿತ್ತು. 14 ಎಕರೆ 20 ಗುಂಟೆ ಜಮೀನು ಸಿದ್ದಪ್ಪನ ಹೆಸರಿಗೆ ಖಾತೆಯಾಗಿತ್ತು.

3. 14 ಎಕರೆ 20 ಗುಂಟೆ ಜಮೀನಿನ ಪೈಕಿ 7 ಎಕರೆ 14 ಗುಂಟೆ ರುದ್ರಪ್ಪನ ಹೆಸರಿನಲ್ಲಿ, 34 ಗುಂಟೆ ಗಂಗಾಧರಪ್ಪನವರ ಹೆಸರಿನಲ್ಲಿ, 30 ಗುಂಟೆ ಶಿವರುದ್ರಪ್ಪನವರಅಂದರೆ ನನ್ನ ತಂದೆಯ ಹೆಸರಿನಲ್ಲಿ, 34 ಗುಂಟೆ ಶೇಖರಪ್ಪನವರ ಹೆಸರಿನಲ್ಲಿ, 30 ಗುಂಟೆ ಜಮೀನು ಮಹೇಶ್ವರಪ್ಪನವರ ಹೆಸರಿನಲ್ಲಿ, ಪ್ರಕಾಶ್‌ರವರ ಹೆಸರಿನಲ್ಲಿ 34 ಗುಂಟೆ ಇರುತ್ತದೆ. ಸಿದ್ದಪ್ಪನವರು 02 ಎಕರೆ 36 ಗುಂಟೆ ಜಮೀನನ್ನು ಪಂಪ್ ಹೌಸ್‌ಗೆ 1960 ರಲ್ಲಿ ಮಾರಾಟ ಮಾಡಿರುತ್ತಾರೆ. ತಹಶೀಲ್ದಾರರವರು ಆ ಜಮೀನನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಆ ಬಗ್ಗೆ ನಮೂನೆ 5 ಮತ್ತು 6 ನ್ನು ಹಾಜರುಪಡಿಸಿರುತ್ತೇನೆ.

4. 1992 ಅಥವಾ 1995 ರಲ್ಲಿ ಸರ್ಕಾರದಿಂದ ಸವಲತ್ತು ಪಡೆಯಲು ಮೇಲೆ ಹೇಳಿದ ಎಲ್ಲರೂ ಅಂದರೆ ನನ್ನ ತಂದೆ ಮತ್ತು ಅವರ ಸಹೋದರರು ಮತ್ತು ಅವರ ಮಕ್ಕಳುಗಳೂ ಸದರಿ ಜಮೀನನ್ನು ಭಾಗ ಮಾಡಿಕೊಂಡು ಖಾತೆ ಮಾಡಿಸಿಕೊಂಡಿರುತ್ತಾರೆ. ಸದರಿ ಜಮೀನನ್ನು ನಮ್ಮ ತಂದೆ ಹಾಗೂ ಅವರ ಸಹೋದರರು ಭಾಗ ಮಾಡಿಕೊಂಡ ವಿಚಾರ ನನ್ನ ಗಮನಕ್ಕೆ ಇತ್ತು. ಐಟಮ್ ನಂ. 02 ರ ಸರ್ವೆ ನಂಬರ್‌ನಲ್ಲಿ 15 ಎಕರೆ 39 ಗುಂಟೆ ಜಮೀನು ಇತ್ತು ಎಂದರೆ

ಸರಿಯಲ್ಲ. ಸದರಿ ಜಮೀನಿನ ಪೈಕಿ 1 ಎಕರೆ 19 ಗುಂಟೆ ಜಮೀನನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ 1935 ರಲ್ಲಿ ಕೆಲ್ಲೋಡು ನದಿಗೆ ಅಡ್ಡಲಾಗಿ ಸೇತುವೆ ಕಟ್ಟಲು ಬಿಟ್ಟುಕೊಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. 1 ಎಕರೆ 19 ಗುಂಟೆ ಜಮೀನು ಸೇತುವೆಗೆ ಹೋದ ನಂತರ 14 ಎಕೆರೆ 20 ಗುಂಟೆ ಜಮೀನು ಉಳಿದಿತ್ತು ಎಂದರೆ ಸರಿ.

5. ಸದರಿ 14 ಎಕರೆ 20 ಗುಂಟೆ ಜಮೀನನ್ನು ನನ್ನ ತಾತ ಪರಣ್ಣ ಮತ್ತು ಅವರು ಇಬ್ಬರು ಸಹೋದರರು ವಿಭಾಗ ಮಾಡಿಕೊಂಡರು ಎಂದರೆ ಸರಿಯಲ್ಲ. ಊರಿನಲ್ಲಿದ್ದ ನಿವೇಶನ ಮತ್ತು ಮನೆಯನ್ನು ಸಿದ್ದಪ್ಪ ನ ಭಾಗಕ್ಕೆ ಕೊಟ್ಟು ನನ್ನ ತಾತ ಪರಣ್ಣ ಮತ್ತು ಅವರ ಸಹೋದರ ಮಲ್ಲಪ್ಪ 14 ಎಕರೆ 20 ಗುಂಟೆ ಜಮೀನನ್ನು ತಲಾ 7 ಎಕರೆ 10 ಗುಂಟೆ ಯಂತೆ ಭಾಗಮಾಡಿಕೊಂಡರು ಎಂದರೆ ಸರಿಯಲ್ಲ. ಹೊಸರಾಳು ಗ್ರಾಮದ ಸರ್ವೆ ನಂ. 7/9 ರಲ್ಲಿ 03 ಎಕರೆ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸರ್ವೆ ನಂ. 67/2 ರಲ್ಲಿ 03 ಎಕರೆ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸರ್ವೆನಂ. 7/2 ರ 6 ಎಕರೆ ಜಮೀನು ನನ್ನ ತಾತ ಪರಣ್ಣನವರ ಹೆಸರಿನಲ್ಲಿ ಇರುತ್ತದೆ.

6. ಸರ್ವೆ ನಂ. 38/1 ಎ ಜಮೀನಿನ 2 ಎಕರೆ 36 ಗುಂಟೆ ಜಮೀನನ್ನು ಪುರಸಭೆಗೆ ಎಷ್ಟು ಬೆಲೆಗೆ ಮಾರಾಟ ಮಾಡಲಾಯಿತು ಎಂದು ನನಗೆ ಗೊತ್ತಿಲ್ಲ. 1960 ರಲ್ಲಿ ಮಾರಾಟ ಮಾಡಿರುತ್ತಾರೆ. ನಾನು ಮಾರಾಟ ಮಾಡಿದ ಬಗ್ಗೆ ಪತ್ರವನ್ನು ನೋಡಿರುವುದಿಲ್ಲ. ಇದೇ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಒ.ಎಸ್.197/2018 ರ ದಾವೆಯನ್ನು ಸಲ್ಲಿಸಿದ್ದೇನು ಎಂದರೆ ಸರಿ. ದಿ: 08.06.1930 ರಂದು ನನ್ನ ತಾತ ಹಾಗೂ ಅವರ ಸಹೋದರರು ಕುಟುಂಬದ ಸ್ವತ್ತುಗಳನ್ನು ಭಾಗಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿ: 04.02.1989 ರಲ್ಲಿ ನಮ್ಮ ತಂದೆ ಹಾಗೂ ಅವರ ಸಹೋದರರು ನಮ್ಮ ತಾತನಿಗೆ ಸ್ವತ್ತುಗಳನ್ನು ಭಾಗಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

7. ಹೊಸರಾಳು ಗ್ರಾಮದ ಮೇಲೆ ಹೇಳಿದ 2 ಜಮೀನುಗಳನ್ನು ನಮ್ಮ ತಂದೆ ಬೇರೆಯಾದ ನಂತರ ಸ್ವಯಾರ್ಜಿತವಾಗಿ ಖರೀದಿಸಿದ್ದರು. ಯಾವಾಗ ಕ್ರಯಕ್ಕೆಪಡೆದರು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ವ್ಯವಸಾಯ ಮತ್ತು ಕೂಲಿ ಯಿಂದ, ವ್ಯಾಪಾರದಿಂದ ಬಂದ ಆದಾಯದಿಂದ ಸದರಿ ಸ್ವತ್ತುಗಳನ್ನು ಖರೀದಿಸಿದರು. ನನಗೆ ತಿಳುವಳಿಕೆ ಬಂದಾಗಿನಿಂದಳು ನಮ್ಮ ತಂದೆ ಬೇರೆಯಾಗಿ ಇರುತ್ತಾರೆ.

ಶ್ರೀ ಎಸ್.ಜಿ. ವಕೀಲರ ಮನವಿಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ.,ಹೊಸದುರ್ಗ.